# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸಿಎ-3/ SVRFG/ಸ್ಥ.ಬ./2025-26

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 11.11.2025
13

## ಅಧಿಸೂಚನೆ

ವಿಷಯ : 2025-26ನೇ ಶೈಕ್ಷಣಿಕ ಸಾಲಿನಿಂದ **ಸ್ವಾಮಿ ವಿವೇಕಾನಂದ ರೂರಲ್ ಪ್ರಥಮ ದರ್ಜೆ ಕಾಲೇಜಿನ** ಸ್ಥಳ ಬದಲಾವಣೆ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರದ ಸಂಖ್ಯೆ ಇಡಿ 204 ಯುಬಿವಿ 2025, ದಿನಾಂಕ 26.06.2025.
2. ಕುಲಪತಿಯವರ ಅನುಮೋದನೆ ದಿನಾಂಕ:13.11.2025.

*****

ಉಲ್ಲೇಖ(1)ರ ಸರ್ಕಾರದ ಅನುಮೋದನೆಯನ್ವಯ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59(5) ರಡಿ ಬೆಂಗಳೂರು ವಿಶ್ವವಿದ್ಯಾಲಯವು ಸ್ವಾಮಿ ವಿವೇಕಾನಂದ ರೂರಲ್ ಪ್ರಥಮ ದರ್ಜೆ ಕಾಲೇಜು, ಚಂದಾಪುರ, ಆನೇಕಲ್ ತಾಲ್ಲೂಕು, ಬೆಂಗಳೂರು-560081. ಇದರ ಸ್ಥಳವನ್ನು 2025-26ನೇ ಶೈಕ್ಷಣಿಕ ಸಾಲಿನಿಂದ ಸರ್ವೆ ನಂ.31/1, ನೆರಳೂರು, ಅತ್ತಿಬೆಲೆ ಹೋಬಳಿ,ಬೆಂಗಳೂರು-562 107 ಇಲ್ಲಿಗೆ ಸ್ಥಳಾಂತರಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿ ನೀಡಿದೆ.

**ಸ್ಥಳ ಬದಲಾವಣೆ:-**

| ಪ್ರಸ್ತುತ ವಿಳಾಸ | ಸ್ಥಳ ಬದಲಾವಣೆ ವಿಳಾಸ |
|---|---|
| ಸ್ವಾಮಿ ವಿವೇಕಾನಂದ ರೂರಲ್ ಪ್ರಥಮ ದರ್ಜೆ ಕಾಲೇಜು, ಚಂದಾಪುರ, ಆನೇಕಲ್ ತಾಲ್ಲೂಕು, ಬೆಂಗಳೂರು-560081. | ಸ್ವಾಮಿ ವಿವೇಕಾನಂದ ರೂರಲ್ ಪ್ರಥಮ ದರ್ಜೆ ಕಾಲೇಜು, ಸರ್ವೆ ನಂ.31/1, ನೆರಳೂರು, ಅತ್ತಿಬೆಲೆ ಹೋಬಳಿ, ಬೆಂಗಳೂರು-562 107. |

**ಷರತ್ತುಗಳು:**

1. ಸ್ಥಳ ಬದಲಾವಣೆಯಿಂದ ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಯಾವುದೇ ದೂರುಗಳು ಬರದಂತೆ ಕಾಲೇಜುಗಳು ಖಾತರಿ ಪಡಿಸಕೊಳ್ಳತಕ್ಕದ್ದು.
2. ಈಗಾಗಲೇ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಸ್ಥಳ ಬದಲಾವಣೆಯಿಂದ ಯಾವುದೇ ತೊಂದರೆಯಾಗದಂತೆ ಖಚಿತಪಡಿಸಿಕೊಳ್ಳತಕ್ಕದ್ದು. ಯಾವುದೇ ವಿದ್ಯಾರ್ಥಿಗಳು ಬಯಸಿದಲ್ಲಿ ಅವರನ್ನು ಹತ್ತಿರದ ಕಾಲೇಜುಗಳಿಗೆ ವರ್ಗಾಯಿಸತಕ್ಕದ್ದು. ಅವರ ಶೈಕ್ಷಣಿಕ ದಾಖಲೆಗಳನ್ನು ಸಹ ಸುರಕ್ಷತವಾಗಿ ವರ್ಗಾಯಿಸತಕ್ಕದ್ದು.
3. ಸ್ಥಳ ಬದಲಾವಣೆ ಕಾರಣಕ್ಕಾಗಿ ವಿದ್ಯಾರ್ಥಿಗಳಿಂದ ಹಾಗೂ ಪೋಷಕರಿಂದ ಯಾವುದೇ ದೂರುಗಳು ಬರದಂತೆ ಹಾಗೂ ಕಾಲೇಜಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸುರಕ್ಷಿತವಾಗಿ ಹೊಸ ಸ್ಥಳಕ್ಕೆ ವರ್ಗಾಯಿಸತಕ್ಕದ್ದು.

14/11/25

4. ಕಾಲೇಜಿನ ಸ್ಥಳ ಬದಲಾವಣೆಯಿಂದ ಸಂಯೋಜನೆ/ಮುಂದುವರಿಕೆ ಸಂಯೋಜನೆಗೆ ಪೂರಕವಾಗಿ ವಿಧಿಸಲಾಗಿರುವ ಷರತ್ತುಗಳು ಯಥಾವತ್ತಾಗಿ ಮುಂದುವರೆಯುತ್ತವೆ ಮತ್ತು ಇವುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.
5. ಒಂದು ಪಕ್ಷ ಕಾಲೇಜಿನ ಆಡಳಿತ ಮಂಡಳಿಯವರು ಈ ಷರತ್ತುಗಳನ್ನು ಅನುಸರಿಸದಿದ್ದಲ್ಲಿ ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಕಾಲೇಜಿಗೆ ವಿದ್ಯಾರ್ಥಿ ಪ್ರವೇಶವನ್ನು ವಿಶ್ವವಿದ್ಯಾಲಯವು ಅಂಗೀಕರಿಸತಕ್ಕದ್ದಲ್ಲ;

   06 ತಿಂಗಳುಗಳ ಒಳಗಾಗಿ ವಿದ್ಯಾರ್ಥಿ ತಲಾವಾರು ತರಗತಿ ಹಾಗೂ ಪ್ರಯೋಗಾಲಯ ಪ್ರದೇಶ ಲಭ್ಯತೆಯ ಹಾಗೂ ಯುಜಿಸಿ ವಿನಿಮಯಗಳನ್ವಯ ಅಗತ್ಯವಾಗುವ ಮೂಲಧನ ನಿರ್ವಹಣೆ
6. ಮುಚ್ಚಳಿಕೆಯಲ್ಲಿ ಕಾರ್ಯಗತಗೊಳಿಸುವಿಕೆ ನಿಯತಾಂಕಗಳನ್ನು ಪೂರೈಸತಕ್ಕದ್ದು. ತಪ್ಪಿದಲ್ಲಿ, ಕಾಲೇಜಿನ ಸ್ಥಳ ಬದಲಾವಣೆಗೆ ನೀಡಲಾಗಿರುವ ಅನುಮತಿಯು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತವೆ.
7. 06 ತಿಂಗಳುಗಳ ಒಳಗಾಗಿ ಪಿಹೆಚ್‌ಡಿ ಹಾಗೂ NET/SLET ಅರ್ಹತೆಯ ಬೋಧಕರನ್ನು ನೇಮಿಸಿಕೊಳ್ಳತಕ್ಕದ್ದು ಹಾಗೂ ಅರ್ಹ ಬೋಧಕರಿಗೆ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಾವತಿಸತಕ್ಕದ್ದು, ನ್ಯಾಕ್ ಮಾನ್ಯತೆಯನ್ನು ಇದೇ ಶೈಕ್ಷಣಿಕ ವರ್ಷದಲ್ಲಿ ಪಡೆಯತಕ್ಕದ್ದು, ಭದ್ರತಾ ಸಿಬ್ಬಂದಿಯನ್ನು ಬಲಪಡಿಸುವುದು, ಬ್ಯುಸಿನೆಸ್ ಲ್ಯಾಬ್ ಸ್ಥಾಪಿಸುವುದು, ಭಾಷಾ ಪ್ರಯೋಗಾಲಯಕ್ಕೆ ನಾವೀನ್ಯ ತಂತ್ರಾಂಶಗಳನ್ನು ಖರೀದಿಸುವುದು ಸೇರಿದಂತೆ ಸ್ಥಳೀಯ ವಿಚಾರಣೆ ಸಮಿತಿಯ ಎಲ್ಲಾ ಷರತ್ತುಗಳನ್ನು 03 ತಿಂಗಳ ಒಳಗಾಗಿ ಪೂರೈಸತಕ್ಕದ್ದು. ತಪ್ಪಿದಲ್ಲಿ 2026-27ನೇ ಸಾಲಿನಿಂದ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೂಚನೆ ನೀಡಲಾಗಿದೆ.

ಆದೇಶದ ಮೇರೆಗೆ

Digitally signed by
SHANTHALA K T
Date: 13-11-2025
13:17:48

**ಕುಲಸಚಿವರು**

**ಗೆ,**
**ಪ್ರಾಂಶುಪಾಲರು,**
**ಸ್ವಾಮಿ ವಿವೇಕಾನಂದ ರೂರಲ್ ಪ್ರಥಮ ದರ್ಜೆ ಕಾಲೇಜು,**
**ಸರ್ವೆ ನಂ.31/1, ನೆರಳೂರು, ಅತ್ತಿಬೆಲೆ ಹೋಬಳಿ,**
**ಬೆಂಗಳೂರು-562 107.**
**UUCMS Code : P21GMJ0263**

C: ಎಸಿಎ-3/ SVRFG/ಸ್ಥ.ಬ./2025-26

**ಪ್ರತಿಗಳು:**

1. ಸರ್ಕಾರದ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-560 001.
2. ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-560 056.
3. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056.
4. ಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು ಶೈಕ್ಷಣಿಕ ವಿಭಾಗ-1/4, ಬೆಂ.ವಿ.ವಿ., ಬೆಂಗಳೂರು-560 056.
5. ಅಧೀಕ್ಷಕರು, ಕಾನ್ಫಿಡೆನ್ಷಿಯಲ್ ವಿಭಾಗ, ಪರೀಕ್ಷಾ ವಿಭಾಗ, ಬೆಂ.ವಿ.ವಿ., ಬೆಂಗಳೂರು-560 056.
6. ಐ.ಟಿ. ಕೋಆರ್ಡಿನೇಟರ್, ಯು.ಯು.ಸಿ.ಎಂ.ಎಸ್., ಬೆಂ.ವಿ.ವಿ, ಬೆಂಗಳೂರು-560 056.
7. ಸಹಾಯಕ ನಿರ್ದೇಶಕರು, ಅಂಕಿ ಅಂಶಗಳ ವಿಭಾಗ, ಬೆಂ.ವಿ.ವಿ., ಬೆಂಗಳೂರು-560 056.